**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.8/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಹನುಮಂತಪ್ಪ |
| ತಂದೆಯ ಹೆಸರು | : | ಮಹಾಂತೇಶ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಸಿ.ಪಿ.ಐ., ತಳಕು ವೃತ್ತ, ಚಳ್ಳಕೆರೆ ತಾಲ್ಲೂಕು |
| ವಾಸ ಸ್ಥಳ | : | ಚಳ್ಳಕೆರೆ |

ಪಿ.ಡಬ್ಲ್ಯೂ 9

ಸಿ.ಡಬ್ಲ್ಯೂ 13

ದಿ: 20-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಜನವರಿ 2021 ರಿಂದ ಸೆಪ್ಟೆಂಬರ್ 2021 ರವರೆಗೆ ನಾನು CEN ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ಮಾಡಿದ್ದೇನೆ. ದಿಃ 03-04-2021 ರಂದು ಚಾಸಾ-1 ರವರು ಮಧ್ಯಾಹ್ನ 1.45 ಗಂಟೆಗೆ ಗಾಂಜಾ ಮಾರಾಟ ಮಾಡುತ್ತಿರುವವರ ಮೇಲೆ ದಾಳಿ ಮಾಡಿ ಇಬ್ಬರು ಆರೋಪಿತರು ಹಾಗೂ ದಾಳಿ ಕಾಲಕ್ಕೆ ವಶಪಡಿಸಿಕೊಂಡ ಗಾಂಜಾ ಮತ್ತು ಪಂಚನಾಮೆ ತಂದು ಹಾಜರುಪಡಿಸಿ ಗಣಕೀಕೃತ ದೂರನ್ನು ತಯಾರಿಸಿ ನೀಡಿದ್ದು, ನಾನು ಠಾಣಾ ಗುನ್ನೆ ನಂಬರ 20/2021 ರಲ್ಲಿ ನೊಂದಾಯಿಸಿ FIR ನ್ನು ತಯಾರಿಸಿ FIR ನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಲ್ಲಿ ನಿವೇದಿಸಿಕೊಂಡಿರುತ್ತೇನೆ. ಪ್ರ.ವ.ವರದಿಯನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಪ್ರ.ವ.ವರದಿಯನ್ನು ನಿಪಿ-35 ಅಂತ, ಸಾಕ್ಷಿಯ ಸಹಿಯನ್ನು ನಿಪಿ-35(ಎ) ಅಂತ ಗುರುತಿಸಲಾಯಿತು.

2. ನಂತರ ದಾಳಿ ಕಾಲಕ್ಕೆ ವಶಪಡಿಸಿಕೊಂಡ ಗಾಂಜಾ ಮುದ್ದೆ ಮಾಲನ್ನು ಠಾಣಾ ಪಿ.ಎಫ್. ನಂಬರ 24/2021 ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಮಾಲು ಪಟ್ಟಿಗೆ ಅಳವಡಿಸಿಕೊಂಡಿರುವ ಮಾಲುಗಳು ಈಗ ನ್ಯಾಯಾಲಯದ ಮುಂದೆ ಇರುತ್ತದೆ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ಈಗಾಗಲೇ ಮು.ಮಾ.1 ರಿಂದ 8 ಅಂತ ಗುರುತಿಸಲಾಗಿದೆ. ಅವುಗಳನ್ನು ಸಾಕ್ಷಿದಾರರು ಗುರುತಿಸುತ್ತಾರೆ. ಮು.ಮಾ.5 ನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಅಂತ ನುಡಿದಿರುತ್ತಾರೆ.

3. ನಂತರ ಅಂತರಾಮ ತೀರ್ಕಿ ಮತ್ತು ಮಧುರಾಜ @ ಮಧು ನಾಯ್ಕ ರವರನ್ನು ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಅನುಸರಿಸಿ ಅವರ ಸ್ವಖುಷಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅವರ ಸ್ವಖುಷಿ ಹೇಳಿಕೆಗಳಲ್ಲಿ ಅವರ ಮ್ಯಾನೇಜರ್ ಆದಂತಹ ಅನಿಲ್ ಜಾಕೂಬ್ ರವರು ಗಾಂಜಾವನ್ನು ಮಾರಾಟ ಮಾಡಿ ಹಣವನ್ನು ತೆಗೆದುಕೊಂಡು ಬನ್ನಿ ನಾನು ಹೆಚ್ಚಿನ ಹಣವನ್ನು ಕೊಡುತ್ತೇನೆ ಅಂತ ಹೇಳಿದರು, ಅದಕ್ಕಾಗಿ ನಾವು ಗೋವಾದಿಂದ ದಾವಣಗೆರೆಗೆ ಬಂದು ಮಾರಾಟ ಮಾಡುತ್ತಿದ್ದೇವೆ ಮತ್ತು ಈ ಹಿಂದೆಯು ಸಹ ಕರ್ನಾಟಕಕ್ಕೆ ಬಂದು ಗಾಂಜಾವನ್ನು ಮಾರಾಟ ಮಾಡಿ ಹಣವನ್ನು ಅನಿಲ್ ಜಾಕೂಬ್ ರವರಿಗೆ ಕೊಟ್ಟಿದ್ದೇವೆ ಅಂತ ತಿಳಿಸಿರುತ್ತಾರೆ. ನಂತರ 1 ನೇ ಆರೋಪಿತನು ಹಿಂದಿ ಭಾಷೆ ಮಾತನಾಡುತ್ತಿದ್ದರಿಂದ, ಚಾಸಾ-3 ರವರು 1 ನೇ ಆರೋಪಿಗೆ ನಾನು ಕನ್ನಡದಲ್ಲಿ ಹೇಳಿದ್ದನ್ನು ಹಿಂದಿಯಲ್ಲಿ ಭಾಷಾಂತರ ಮಾಡಿ ಹೇಳಿರುತ್ತಾರೆ. ಆರೋಪಿತರ ಸ್ವಖುಷಿ ಹೇಳಿಕೆಗಳನ್ನು ಈಗ ನೋಡಿ ಅದರಲ್ಲಿರುವ ನನ್ನ ಹಾಗೂ ಆರೋಪಿತರ ಸಹಿಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಆರೋಪಿತರ ಪರ ವಕೀಲರ ತಕರಾರಿಗೆ ಒಳಪಟ್ಟು ಕ್ರಮವಾಗಿ ನಿಪಿ-36 ಮತ್ತು 37 ಅಂತ, ಸಾಕ್ಷಿಯ ಸಹಿಗಳನ್ನು ನಿಪಿ-36(ಎ) ಮತ್ತು 37(ಎ) ಅಂತ, ಆರೋಪಿತರ ಸಹಿಗಳನ್ನು ನಿಪಿ-36(ಬಿ) ಮತ್ತು 37(ಬಿ) ಅಂತ ಗುರುತಿಸಲಾಯಿತು. ನಂತರ ಆರೋಪಿತರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಸೂಕ್ತ ಬೆಂಗಾವಲಿನೊಂದಿಗೆ ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೇನೆ. 1 ನೇ ಆರೋಪಿಯ ಸಹಿ ಹಿಂದಿ ಭಾಷೆಯಲ್ಲಿ ಇರುತ್ತದೆ. 2 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ನಾನು ದಸ್ತಗಿರಿ ಮಾಡಿದ 1 ಮತ್ತು 2 ನೇ ಆರೋಪಿತರ ಪೈಕಿ 2 ನೇ ಆರೋಪಿಯನ್ನು ಈಗ ವಿಸಿಯಲ್ಲಿ ನೋಡಿ ಗುರುತಿಸುತ್ತೇನೆ. ( 2 ನೇ ಆರೋಪಿಯು ಮತ್ತೊಂದು ಪ್ರಕರಣದಲ್ಲಿ ಆರೋಪಿಯಾಗಿದ್ದು ಅವರು ಈಗ ಗೋವಾ ಜೆ.ಸಿ.ಯಲ್ಲಿ ಇರುತ್ತಾರೆ.) ತಲೆ ಮರೆಸಿಕೊಂಡು 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ-2 ರಿಂದ 8, 10, 11 ರವರ ಹೇಳಿಕೆಗಳನ್ನು ಅದೇ ದಿನ ಪಡೆದುಕೊಂಡಿರುತ್ತೇನೆ.

4. ದಿಃ 05-04-2021 ರಂದು ದಾವಣಗೆರೆಯ 2 ನೇ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ದಾಳಿ ಕಾಲಕ್ಕೆ ವಶಪಡಿಸಿಕೊಂಡ ಮುದ್ದೆ ಮಾಲುಗಳನ್ನು ಇನ್ವೆಂಟರಿ ಮಾಡಿಸಲು ಕೇಳಿಕೊಂಡಿರುತ್ತೇನೆ. ಕೋರಿಕೆ ಪತ್ರ ಜರಾಕ್ಸ ಪ್ರತಿ ಆಗಿರುವುದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ. ನಂತರ ಅದೇ ದಿನ ಸಂಜೆ ದಾವಣಗೆರೆಯ 2 ನೇ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಇನ್ವೆಂಟರಿ ಮಾಡಿಸಿದ್ದು, ಆ ಕಾಲಕ್ಕೆ ಪ್ರತಿ ಗಾಂಜಾ ಪ್ಯಾಕೆಟ್ ನಿಂದ ತಲಾ 50 ಗ್ರಾಂ. ಗಾಂಜಾವನ್ನು FSL ಗೆ ಕಳುಹಿಸಲು Sample ನ್ನು ತೆಗೆಯಲಾಯಿತು. ಆ ಕಾಲಕ್ಕೆ ಪೋಟೋಗ್ರಾಫಿ ಮತ್ತು ವಿಡಿಯೋಗ್ರಾಫಿಯನ್ನು ಚಾಸಾ-9 ರವರಿಂದ ಮಾಡಿಸಲಾಯಿತು. ನಂತರ ಇನ್ವೆಂಟರಿ ಕಾಲಕ್ಕೆ Sample ತೆಗೆದ ಸೊತ್ತಿನ ಪಟ್ಟಿ 25/2021 ನೇದಕ್ಕೆ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಇನ್ವೆಂಟರ್ ಗೆ ಸಂಬಂಧಪಟ್ಟ 03 Certificate ಗಳನ್ನು ನ್ಯಾಯಾಲಯದಿಂದ ನೀಡಿರುತ್ತಾರೆ. ಅವುಗಳನ್ನು ಈಗ ನೋಡಿ ಗುರುತಿಸುತ್ತೇನೆ. ಅವುಗಳನ್ನು ನಿಪಿ-38 ರಿಂದ 40 ಅಂತ ಗುರುತಿಸಲಾಯಿತು.

ಮೂಲ ದಾಖಲೆಗಳು ಕಡತದಲ್ಲಿ ಲಭ್ಯವಿಲ್ಲದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.